ರಾಜಕೀಯದಿಂದ ನಿವೃತ್ತಿ ಹೊಂದಬೇಕು. ಮುಖ್ಯಮಂತ್ರಿಯವರು ಸಹಿ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಈಗ Judicial enquiry ಗೆ ಒಪ್ಪಿಸಲು ಸರ್ಕಾರ ತೀರ್ಮಾನ ಮಾಡಿದೆ. ದಯವಿಟ್ಟು ಅದಕ್ಕೆ ಗೌರವಿಸಿ ಇವತ್ತಿನ ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

(ಈ ಹಂತದಲ್ಲಿ ಸಿಬಿಐ ತನಿಖೆ ಆಗಲೇಬೇಕೆಂದು ಬಿಜೆಪಿ ಸದಸ್ಯರು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು:– ಈಗ ವರದಿಯನ್ನೊಪ್ಪಿಸುವುದು. ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ವರದಿಯನ್ನೊಪ್ಪಿಸುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ನಾನು ಪ್ರಾಮಾಣಿಕ, ನನ್ನದೇನೂ ಇಲ್ಲ. ಮತ್ತೊಂದು ಇಲ್ಲವೆಂದು ಎಲ್ಲವನ್ನೂ ಹೇಳಿದರು. ಇವತ್ತು ಮುಖ್ಯಮಂತ್ರಿಯವರು ಸುಳ್ಳುಗಾರ ಎನ್ನುವುದು prove ಆಗಿದೆ. ಮಹಾಸುಳ್ಳುಗಾರರೆಂದು prove ಆಗಿದೆ. ನನ್ನದೇನೂ ಪಾತ್ರ ಇಲ್ಲ. ನನಗೇನೂ ಸಂಬಂಧವಿಲ್ಲ ಎಂದು ಹೇಳಿದವರು ಇವತ್ತು ಈ ಒಂದು ಸಹಿ ಮಾಡಿ . . .

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, Why he is speaking? Ask him to sit.

(ಗೊಂದಲ)